ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಗುರುವಾರ ೧೪ನೇ ಮಾರ್ಚ್ ೧೯೯೧, ಫಾಲ್ಗುಣ ೨೩, ಶಕ ೧೯೧೨

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಬಾಂಗಣದಲ್ಲಿ

ಬೆಳಿಗ್ಗೆ ೧೧.೧೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ಎಸ್.ಎಂ. ಕೃಷ್ಣ) ಅವರು ಪೀಠವನ್ನು ಅಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಪರಿಹಾರ ಕಾಮಗಾರಿಗಳಿಗಾಗಿ ಅನುದಾನ ಹಾಗೂ ಕಂದಾಯದ ವಸೂಲಿ

1225 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಅಭಾವ ಪೀಡಿತ ಪ್ರದೇಶಗಳಲ್ಲಿ ಕಂದಾಯ ಅಧಿಕಾರಿಗಳು ಕಂದಾಯವನ್ನು ವಸೂಲಿ ಮಾಡುತ್ತಿರುವುದು ನಿಜವೆ;

ಆ) ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಇ) ಬರಗಾಲ ಪರಿಹಾರಕ್ಕಾಗಿ ರಾಜ್ಯ ಸರ್ಕಾರವು ಬಿಡುಗಡೆ ಮಾಡಿರುವ ಒಟ್ಟು ಹಣವೆಷ್ಟು?

ಈ) 1990-91ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಗೆ ಬಿಡುಗಡೆ ಮಾಡಿರುವ ಹಣವೆಷ್ಟು? (ಇಲಾಖಾವಾರು ತಾಲ್ಲೂಕುವಾರು ವಿವರಗಳನ್ನು ಒದಗಿಸುವುದು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) 31.00 ಕೋಟಿ ರೂಪಾಯಿಗಳು

ಈ) ಪ್ರಕೃತಿ ವಿಕೋಪ ಪರಿಹಾರ ನಿಧಿಯಲ್ಲಿ ತಾಲ್ಲೂಕುವಾರು ಬಿಡುಗಡೆ ಮಾಡಿರುವ ಹಣ ಈ ಕೆಳಕಂಡಂತಿದೆ

	ತಾಲ್ಲೂಕು	ಲಕ್ಷ ರೂ.ಗಳಲ್ಲಿ
1.	ರಾಮನಗರ	3.25
2.	ಚನ್ನಪಟ್ಟಣ	3.50
3.	ಕನಕಪುರ	3.08
4.	ದೊಡ್ಡಬಳ್ಳಾಪುರ	3.50

5.	ದೇವನಹಳ್ಳಿ	2.90
6.	ನೆಲಮಂಗಲ	2.30
7.	ಹೊಸಕೋಟೆ	3.20

ಜವಾಹರ್ ರೋಜ್‌ಗಾರ್ ಯೋಜನೆ ಅಡಿಯಲ್ಲಿ ರೂ. 53.713 ಲಕ್ಷಗಳನ್ನು 103 ಮಂಡಳಗಳಿಗೆ ವಿತರಿಸಲಾಗಿದೆ.

ಶ್ರೀ ಸಾದತ್ ಆಲಿಖಾನ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಕಂದಾಯ ಇಲಾಖಾ ಅಧಿಕಾರಿಗಳು ಅರಿಯರ್ಸ್ ರೆವಿನ್ಯೂ ಕಲೆಕ್ಷನ್ ಮಾಡುತ್ತಾ ಇಲ್ಲ ಎಂದು ಹೇಳುತ್ತಾರೆ. ಆದರೆ ನಮ್ಮ ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಬೇಕಾದಷ್ಟು ಪ್ರಮಾಣದಲ್ಲಿ ಎಲ್ಲಾ ಕಡೆ ಈ ಅರಿಯರ್ಸ್ ಕಲೆಕ್ಷನ್ ಕಾರ್ಯ ನಡೆಯುತ್ತಾ ಇದೆ. ಮೊನ್ನೆ 8ನೇ ತಾರೀಖಿನ ದಿವಸ ಪಂಚಾಯತ್ ಸಮಿತಿಯಲ್ಲೂ ಕೂಡ ಎಲ್ಲರೂ ಇದನ್ನು ವಿರೋಧಿಸಿ ಧರಣಿ ಮಾಡುತ್ತೇವೆ ಎಂದು ಜನ ಬಂದಿದ್ದರು. ತಹಶೀಲ್ದಾರರಿಗೆ ಕೇಳಿದರೆ ಅವರು ತಮಗೆ ಟಾರ್ಗೆಟ್ ಫಿಕ್ಸ್ ಮಾಡಿದ್ದಾರೆ ಎಂದು ಹೇಳುತ್ತಾರೆ, ಅಸಿಸ್ಟೆಂಟ್ ಕಮಿಶನರ್ ಕೂಡ ನಮಗೆ ಟಾರ್ಗೆಟ್ ಫಿಕ್ಸ್ ಮಾಡಿದ್ದಾರೆ ಎಂದು ಹೇಳುತ್ತಾರೆ. ಈ ಬಗ್ಗೆ ಡಿಸಿ ಯವರಿಗೆ ಪತ್ರ ಬರೆದಿದ್ದರೂ ಕೂಡ ಇನ್ನೂ ಕಲೆಕ್ಷನ್ ನಡೆಯುತ್ತಾ ಇದೆ.

ಅಧ್ಯಕ್ಷರು : ಯಾವ ಕಲೆಕ್ಷನ್ ಸ್ವಾಮಿ?

ಶ್ರೀ ಸಾದತ್ ಆಲಿಖಾನ್ : ನಮ್ಮ ತಾಲ್ಲೂಕಿನಲ್ಲಿಯ ರೆವಿನ್ಯೂ ಅರಿಯರ್ಸ್ ಕಲೆಕ್ಷನ್ ರಾಜ್ಯದಲ್ಲಿ ರೆವಿನ್ಯೂ ಅರಿಯರ್ಸ್ ಕಲೆಕ್ಷನ್ ಮಾಡುತ್ತಾ ಇಲ್ಲ ಎಂದು ಮಾನ್ಯ ಸಚಿವರು ಹೇಳಿದ್ದಕ್ಕಾಗಿ ಇದನ್ನು ಕೇಳಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಾಜ್ಯದಲ್ಲಿ ಎಲ್ಲಿ ಅಭಾವಪೀಡಿತ ಪ್ರದೇಶಗಳು ಇವೆ, ಅಲ್ಲಿ ಸದ್ಯಕ್ಕೆ ಈ ರೆವಿನ್ಯೂ ಅರಿಯರ್ಸ್ ಕಲೆಕ್ಷನ್ ಮಾಡಬಾರದು ಎಂದು ಅಧಿಕಾರಿಗಳಿಗೆ ಸುತ್ತೋಲೆಯನ್ನು ಕಳುಹಿಸಿದ್ದೇವೆ. ಆದರೆ ಯಾರು ಕಟ್ಟುವುದಕ್ಕೆ ಶಕ್ತರಾಗಿದ್ದಾರೆ ಅವರಿಂದ ವಸೂಲಿ ಮಾಡಿ ಎಂದು ಹೇಳಿದ್ದೇವೆಯೇ ಹೊರತಾಗಿ ಎಲ್ಲಿ ಅಭಾವಪೀಡಿತ ಪ್ರದೇಶಗಳು ಇವೆ ಅಲ್ಲಿ ಮಾತ್ರ ನೀವು ವಸೂಲಿಗೆ ಹೋಗಬಾರದು ಎಂದು ಸುತ್ತೋಲೆಯನ್ನು ಹಿಂದೆ ಮೇ ತಿಂಗಳಲ್ಲಿ ಮಾನ್ಯ ಶ್ರೀ ಕೆ.ಹೆಚ್.ಪಾಟೀಲರು ಇದ್ದಾಗಲೇ ಕಳುಹಿಸಿದ್ದೇವೆ. ಆದುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಸಾದತ್ ಆಲಿಖಾನ್ : ತಾವುಗಳು ಹೇಳಿದ ಪ್ರಕಾರ ಸರ್ಕ್ಯುಲರ್ ಬಂದಿದ್ದರೂ ಕೂಡ ಚನ್ನಪಟ್ಟಣದಲ್ಲಿ ರೆವಿನ್ಯೂ ಕಲೆಕ್ಷನ್ ಕಾರ್ಯ ನಡೆಯುತ್ತಾ ಇದೆ. ಅದೇ ನಮ್ಮ ಮುಂದಿರುವ ಸಮಸ್ಯೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಾವು ನಿರ್ದಿಷ್ಟವಾಗಿ ಇಂಥ ಪ್ರಕರಣಗಳನ್ನು ಅವಗಾಹನೆಗೆ ತಂದರೆ ಅದರ ಮೇಲೆ ಏನು ಕ್ರಮ ತೆಗೆದುಕೊಳ್ಳ ಬೇಕೆಂದು ಪರಿಶೀಲನೆ ಮಾಡುತ್ತೇನೆ. ಡಿಸಿ ಯವರಿಗೆ ಕೂಡ ಈ ಬಗ್ಗೆ ನೋಡಲು ತಿಳಿಸುತ್ತೇನೆ.

ಶ್ರೀ ಟಿ.ಎಂ. ಮಂಜುನಾಥ್ : ಬರಪರಿಹಾರ ಕಾಮಗಾರಿಗಳಲ್ಲಿ ಜವಾಹರ್ ರೋಜ್‌ಗಾರ್ ಯೋಜನೆಯಡಿಯಲ್ಲಿ 53.713 ಲಕ್ಷ ರೂಪಾಯಿಗಳನ್ನು 103 ಮಂಡಲಗಳಿಗೆ ವಿತರಿಸಲಾಗಿದೆ ಎಂದು ಹೇಳಿದ್ದೀರಿ. ಅದು ಕೇಂದ್ರ ಸರಕಾರದವರು ಕೊಡತಕ್ಕಂಥ ವಿಚಾರವಾಗಿದ್ದು ಅದು ಬರಪರಿಹಾರ ಕಾಮಗಾರಿಯಲ್ಲಿ ಬರುವುದಿಲ್ಲ. ಅದನ್ನು ಅವರು ಆಜ್ಞೆ ಮಾಡಿದ್ದರು ಸಹ ಈಗಲೂ ಅದು ಬಹಪರಿಹಾರ ಕಾಮಗಾರಿಗಳಿಗೆ ಅನ್ವಯವಾಗುತ್ತಿದೆಯೇ ಎಂಬ ಬಗ್ಗೆ ದಯವಿಟ್ಟು ಸ್ಪೆಸಿಫಿಕ್ ಆಗಿ ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಇದು ದೊಡ್ಡ ಚರ್ಚೆಯ ರೀತಿಯಲ್ಲಿ ನಡೆಯುತ್ತಿದೆಯಲ್ಲ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಜವಾಹರ್ ರೋಜ್‌ಗಾರ್ ಯೋಜನೆಯೂ ಕೂಡ ಎಂಪ್ಲಾಯ್‌ಮೆಂಟ್ ಜನರೇಟಿಂಗ್ ಸ್ಕೀಮ್ ಎಲ್ಲೆಲ್ಲಿ ನಮ್ಮ ನ್ಯಾಚುರಲ್ ಕೆಲಾಮಿಟೀಸ್ ಫಂಡ್‌ನ ಮುಗಿದ ಮೇಲೆ ಎರಡನೇ ಫಂಡ್ ನಾವು ಜವಾಹರ್ ರೋಜ್‌ಗಾರ್ ಯೋಜನೆಯಿಂದ ಅಥವಾ ಬೇರೆ ಇಲಾಖೆಯಿಂದ ತೆಗೆದುಕೊಳ್ಳಬೇಕಾಗುತ್ತದೆ.

ರಾಜ್ಯದ ಜಿಲ್ಲಾ ಪುನರ್ ರಚನೆ ಬಗ್ಗೆ

1227 - ಶ್ರೀ ಡಿ.ಬಿ. ಚಂದ್ರೇಗೌಡ (ತೀರ್ಥಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಪುನರ್ ಜಿಲ್ಲಾ ರಚನೆ ಮಾಡುವ ಆಲೋಚನೆ ಇದೆಯೇ?*

ಆ) *ಹಾಗಿದ್ದಲ್ಲಿ ಗದ್ದೀಗೌಡ್ರ ಮತ್ತು ಹುಂದೇಕಾರ ಸಮುತಿಗಳು ಸರ್ಕಾರಕ್ಕೆ ಸಲ್ಲಿಸಿರುವ ವರದಿಯನ್ನು ಸರ್ಕಾರ ಅನುಷ್ಠಾನಕ್ಕೆ ತರುತ್ತದೆಯೇ?*

ಇ) *ಗದ್ದೀಗೌಡ್ರ ಮತ್ತು ಹುಂಡೇಕಾರ್ ಸಮಿತಿಯು ಕೊಪ್ಪಳ ಜಿಲ್ಲಾ ರಚನೆಯ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆಯೇ?*

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ (ಕಂದಾಯ ಸಚಿವರು) :

ಅ) ಹೌದು

ಆ) ಪರಿಶೀಲನೆಯಲ್ಲಿದೆ

ಇ) ಇಲ್ಲ

ಶ್ರೀ ಡಿ.ಬಿ. ಚಂದ್ರೇಗೌಡ : ರಾಜ್ಯದ ಜಿಲ್ಲಾ ಪುನರ್ ರಚನೆ ವಿಚಾರದಲ್ಲಿ ಅನೇಕ ಸಮಿತಿಗಳನ್ನು ರಚನೆ ಮಾಡಿದ್ದೀರಿ. ಸರಕಾರಕ್ಕೆ ಆ ಸಮಿತಿಗಳವರು ತಮ್ಮ ವರದಿಯನ್ನು ಕೊಟ್ಟಿದ್ದಾರೆ. ಈ ಸಮಿತಿಯ ವರದಿಗಳನ್ನು ಸರಕಾರದವರು ಒಪ್ಪಿಕೊಂಡಿದ್ದಾರೆಯೆ? ಎಕೆಂದರೆ ಜಿಲ್ಲಾ ಪುನರ್ ರಚನೆಯ ಮೂಲ ಉದ್ದೇಶವನ್ನು ನೀವು ಒಪ್ಪಿಕೊಂಡಿದ್ದೀರಿ. ಹಿಂದೆ ಕಂದಾಯ ಸಚಿವರಾಗಿದ್ದಾಗ ಮಾನ್ಯ ಕೆ.ಹೆಚ್. ಪಾಟೀಲ್‌ರವರು ಶೀಘ್ರದಲ್ಲಿಯೇ ಇದನ್ನು ಮಾಡತಕ್ಕಂಥ ಒಂದು ಭರವಸೆಯನ್ನು ಈ ಸದನದ ಹೊರಗಡೆ ಮತ್ತು ಒಳಗಡೆ ಕೊಟ್ಟಿದ್ದರು. ಈಗ ಅದು ಸರಕಾರದ ಪರಿಶೀಲನೆಯಲ್ಲಿದೆ ಅಂದರೆ ಅದರ ಅರ್ಥವೇನು? ಜಿಲ್ಲಾ ಪುನರ್ ರಚನೆ ಮಾಡತಕ್ಕಂಥ ಎಷ್ಟು ಹೊಸ ಜಿಲ್ಲೆಗಳನ್ನು ಗುರುತಿಸಿದ್ದಾರೆ ಈ ಎರಡು ಸಮಿತಿಯವರು ಎಷ್ಟು ಹೊಸ ತಾಲ್ಲೂಕುಗಳನ್ನು ರಚಿಸ ಬೇಕೆಂದು ಶಿಫಾರಸ್ಸು ಮಾಡಿದ್ದಾರೆ? ಅದನ್ನು ಅನುಷ್ಠಾನಕ್ಕೆ ತರಲು ಇರುವ ತೊಂದರೆಗಳು ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈ ಸದನದಲ್ಲಿ ನಾನು ಈ ಕುರಿತು ಎರಡು ಮೂರು ಸಲ ಉತ್ತರವನ್ನು ಕೊಟ್ಟಿದ್ದೇನೆ. ಜಿಲ್ಲೆಗಳನ್ನು ಪುನರ್‌ರಚಿಸುವ ಬಗ್ಗೆ ಪರಿಶೀಲಿಸಲು ಕ್ಯಾಬಿನೆಟ್ ಸಬ್ ಕಮಿಟಿಯನ್ನು ರಚನೆ ಮಾಡಲಾಗಿದೆ. ಅವರು ಈ ಬಗ್ಗೆ ಒಂದು ರಿಪೋರ್ಟ್ ಕ್ಯಾಬಿನೆಟ್‌ಗೆ ಕೊಡುತ್ತಾ ಇದ್ದಾರೆ. ಅದು ಸಚಿವಸಂಪುಟದ ಮುಂದೆ ಹೋದ ಮೇಲೆ ನಿರ್ಣಯವನ್ನು ತೆಗೆದುಕೊಳ್ಳುತ್ತಾರೆ. ಹುಂಡೇಕಾರ್ ಮತ್ತು ಗದ್ದೀಗೌಡರ್ ಸಮಿತಿಯ ರಿಪೋರ್ಟ್ ಪ್ರಕಾರ ಸುಮಾರು 8 ಹೊಸ ಜಿಲ್ಲೆಗಳು ಆಗಬೇಕೆಂದು ಇತ್ತು. ಈ ವಿಚಾರ ಮಾನ್ಯ ವಿರೋಧಪಕ್ಷದ ನಾಯಕರಿಗೂ ಗೊತ್ತಿದೆ. ಆದರೆ ಹಣದ ಕೊರತೆಯನ್ನು ಎದುರಿಸುತ್ತಿರುವ ಸಂದರ್ಭದಲ್ಲಿ 8 ಹೊಸ ಜಿಲ್ಲೆಗಳನ್ನು ಮಾಡುವುದಕ್ಕಾಗುವುದಿಲ್ಲ, ನಾಲ್ಕಾರು ಹೊಸ ಜಿಲ್ಲೆಗಳನ್ನು ರಚಿಸಬೇಕೆಂದು ಕ್ಯಾಬಿನೆಟ್ ಸಬ್ ಕಮಿಟಿಯವರು ಶಿಫಾರಸ್ಸು ಮಾಡಿದ್ದಾರೆ. ಅದನ್ನು